The Academic
International Journal of Multidisciplinary Research
An Online Peer Reviewed / Refereed Journal
Volume 4 | Special Issue 3 | April 2026
ISSN: 2583-973X (Online)
Website: www.theacademic.in

# ಭಾರತೀಯ ಸಂಸ್ಕೃತಿಯಲ್ಲಿ ಸಾಮರಸ್ಯದ ಪ್ರತೀಕವಾಗಿ ಹಿಂದೂ-ಸೂಫಿ ಪರಂಪರೆ

**ಶ್ರೀಮತಿ.ರಾಧ.ಎಂ**

**ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ನರಗುಂದ ಗದಗ ಜಿಲ್ಲೆ, ಕರ್ನಾಟಕ**

**DOI : https://doi.org/10.5281/zenodo.20099998**

**ARTICLE DETAILS**

**Research Paper**

**Accepted:** 04-04-2026

**Published:** 25-04-2026

**Keywords:**

**ABSTRACT**

ಭಾರತದ ಧಾರ್ಮಿಕ ಪರಂಪರೆ ಹಿಂದೂ-ಸೂಫಿ ಸಾಮರಸ್ಯದ ಮೂಲಕ ಮಾನವೀಯ ಮೌಲ್ಯಗಳನ್ನು ಬೋಧಿಸಿ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ವಿವಿಧ ಧರ್ಮಗಳು, ತತ್ತ್ವಗಳು ಮತ್ತು ಸಂಸ್ಕೃತಿಗಳು ಪರಸ್ಪರ ವಿರೋಧಕ್ಕೆ ಒಳಗಾಗದೆ, ಸಮನ್ವಯದ ಸಂಸ್ಕೃತಿಯನ್ನು ರೂಪಿಸಿಕೊಂಡಿರುವುದು ಅದರ ಮಹತ್ವವನ್ನು ಇನ್ನಷ್ಟು ಸ್ಪಷ್ಟಪಡಿಸುತ್ತದೆ. ಭಾರತ ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿ ಜಗತ್ತಿಗೆ ಪ್ರಶ್ನಾತೀತ ಮೌಲ್ಯಗಳನ್ನು ಅನಾವರಣಗೊಳಿಸಿದೆ. ವಿಶ್ವ ನಂಬಲಾಗದ ಧರ್ಮಗಳ ತುಲನಾತ್ಮಕ ಸಮೀಕರಣ ಹೊಂದಿದೆ. ಈ ಮೌಲ್ಯಗಳು ಭಾರತೀಯರಲ್ಲಿ ಜನ್ಮದಿಂದಲೇ ಅಂತರ್ಗತವಾಗಿ ಬಂದಿವೆ. ಕಾರಣ ವಿಕಸನೀಯ ತತ್ವದ ಮೇಲೆ ಸ್ಥಾಪಿತವಾದ ಸಂಸ್ಕೃತಿ. ಇದೇ ಹಿನ್ನೆಲೆಯಲ್ಲಿ ಹಿಂದೂ ಧರ್ಮ ಮತ್ತು ಸೂಫಿ ಪಂಥಗಳ ಸ್ವೀಕಾರಾರ್ಹ ತತ್ವಗಳು ಭಾರತೀಯ ಸಂಸ್ಕೃತಿಯ ಉನ್ನತೀಕರಣದಲ್ಲಿ ಮಹತ್ವದ ನೈತಿಕ ಪಾತ್ರವನ್ನು ವಹಿಸಿವೆ. ‘‘ವಸುದೈವ ಕುಟುಂಬಕಂ” ಮತ್ತು “ಸಬ್ ಕಾ ಮಾಲೀಕ್ ಏಕ್ ಹೈ” ಎಂಬ ತಾತ್ವಿಕ ಧೋರಣೆಗಳು ಭಾರತೀಯ ಸಮಾಜದಲ್ಲಿ ವೈವಿಧ್ಯತೆಯೊಳಗಿನ ಏಕತೆಯನ್ನು ರೂಪಿಸಿದ ಮೂಲಾಧಾರಗಳಾಗಿವೆ. ಸೂಫಿಸಂ ಕ್ರೈಸ್ತ, ಪರ್ಷಿಯನ್, ಇಸ್ಲಾಮಿಕ್, ಜೊರಾಷ್ಟ್ರಿಯನ್ ಮತ್ತು ಭಾರತೀಯ ತತ್ವಗಳ ಸಂಯೋಜನೆಯಾಗಿದೆ. ಭಕ್ತಿ ಮತ್ತು ಶರಣ ಪರಂಪರೆಗಳ ಪ್ರಭಾವದಿಂದ ಸೂಫಿಸಂ ಭಾರತದಲ್ಲಿ ವಿಶಿಷ್ಟ ರೂಪ ಪಡೆದುಕೊಂಡಿತು. ಮಧ್ಯಕಾಲೀನ ಭಾರತದಲ್ಲಿ ಸೂಫಿ ಸಂತರ ಮಾನವತಾವಾದ, ಪ್ರೀತಿ, ಸಮಾನತೆ ಮತ್ತು ಸಹೋದರತ್ವದ ಸಂದೇಶಗಳು ಸಾಮಾಜಿಕ ಸಾಮರಸ್ಯವನ್ನು ಬಲಪಡಿಸಿದವು. ದರ್ಗಾ ಸಂಸ್ಕೃತಿ, ಗುರು-ಶಿಷ್ಯ ಪರಂಪರೆ, ಸಂಗೀತ ಹಾಗೂ ಭಕ್ತಿ ವಿಧಾನಗಳ ಮೂಲಕ ಹಿಂದೂ-ಸೂಫಿ

ಸಂಬಂಧಗಳು ಜನಜೀವನದಲ್ಲಿ ಆಳವಾಗಿ ಬೇರೂರಿದವು. ಈ ಹಿನ್ನಲೆಯಲ್ಲಿ ಹಿಂದೂ ಮತ್ತು ಸೂಫಿ ಪರಂಪರೆಯಲ್ಲಿನ ಸಾಮರಸ್ಯದ ತತ್ವಗಳು ಮತ್ತು ಮಾನವೀಯ ಮೌಲ್ಯಗಳ ಪ್ರಸ್ತುತತೆಯನ್ನು ದ್ವಿತೀಯಕ ಮೂಲಗಳನ್ನು ಆಧರಿಸಿ ವಿಶ್ಲೇಷಣಾತ್ಮಕ ವಿಧಾನದ ಮೂಲಕ ಪ್ರಸ್ತುತಪಡಿಸಲಾಗಿದೆ.

**ಪರಿಚಯ**

ಸೂಫಿ ಎಂಬ ಪದವು ಅರಬ್ಬಿ ಪದವಾದ "ಸೂಫ್" ಎಂಬುದರಿಂದ ಬಂದಿದ್ದು, ಅದರ ಅರ್ಥ "ಉಣ್ಣೆಯ ಬಟ್ಟೆ ಧರಿಸುವವನು" ಎಂದು. ಇನ್ನೊಂದು ಅಭಿಪ್ರಾಯದ ಪ್ರಕಾರ "ಸಫಾ" ಎಂಬ ಪದದಿಂದ ಇದು ಬಂದಿದ್ದು, ಇದರ ಅರ್ಥ ಶುದ್ಧತೆ. ಆದ್ದರಿಂದ ಸೂಫಿ ಎಂದರೆ ಲೋಕದ ದೋಷಗಳಿಂದ ಮುಕ್ತನಾಗಿ ದೇವರ ಭಕ್ತನಾಗಿರುವವನು ಎಂಅರ್ಥ. ಸೂಫಿ ಸಂತರು ದೇವರ ಸ್ಮರಣೆಯಲ್ಲಿ ಸದಾಕಾಲ ಹಾತೊರೆಯುತ್ತಿದ್ದರು, ಅವರ ಪ್ರತಿಯೊಂದು ಕಾರ್ಯವೂ ದೇವರಿಗಾಗಿ ಮಾತ್ರವಾಗಿರುತ್ತದೆ.

ಭಾರತದಲ್ಲಿ ಇಸ್ಲಾಂ 7ನೇ ಮತ್ತು 8ನೇ ಶತಮಾನಗಳಲ್ಲಿ ಪ್ರವೇಶಿಸಿದರೂ, ಸೂಫಿಸಂನ ಪ್ರಭಾವ 10 ನೇ ಮತ್ತು 11ನೇ ಶತಮಾನಗಳಲ್ಲಿ ದೆಹಲಿ ಸುಲ್ತಾನರ ಕಾಲದಲ್ಲಿ ಹೆಚ್ಚು ಗೋಚರಿಸಿತು. 13 ನೇ ಶತಮಾನದಿಂದ ಹಿಂದೂ ವಿಚಾರಗಳು ಮತ್ತು ಆಚರಣೆಗಳೊಂದಿಗೆ ಸೂಫಿಗಳ ಸಂವಾದ ಹೆಚ್ಚಾಯಿತು. ದಕ್ಷಿಣ ಭಾರತದಲ್ಲಿ ಬಹಮನಿ ಆದಿಲ್ ಶಾಹಿ ಸಾಮ್ರಾಜ್ಯಗಳ ಆಡಳಿತಗಾರರು ಸೂಫಿ ಸಂತರಿಗೆ ಆಶ್ರಯ ನೀಡಿದ್ದು, ಅವರ ಆಧ್ಯಾತ್ಮಿಕ ಚಿಂತನೆಗಳು ಸಮಾಜದಲ್ಲಿ ಬೇರೂರಲು ಕಾರಣವಾಯಿತು ಇಸ್ಲಾಂ ಧರ್ಮವನ್ನು ಆಚರಿಸಿದ ಜನರು ಹಿಂದೂ ಸಮುದಾಯದೊಂದಿಗೆ ಆರೋಗ್ಯಕರ ಸೌಹಾರ್ದಯುತ ಸಂಬಂಧ ಉಳಿಸಿಕೊಂಡರು. ಆಡಳಿತಗಾರರು ಯಾವುದೇ ಧರ್ಮಕ್ಕೆ ಸೇರಿದವರಾಗಿದ್ದರೂ ಧಾರ್ಮಿಕ ಸಮಾನತೆಯ ತತ್ವವನ್ನು ಎತ್ತಿಹಿಡಿದರು.

ರಾಜಕೀಯವಾಗಿ ಇಸ್ಲಾಂ ವಿಸ್ತರಿಸಿದರೆ, ಸಾಮಾಜಿಕವಾಗಿ ಅದನ್ನು ಬಲಪಡಿಸಿದ್ದು ಸೂಫಿಗಳು. ಸೂಫಿ ಚಳುವಳಿ ಭಕ್ತಿ ಚಳುವಳಿಯಂತೆ ಮಧ್ಯಯುಗದಲ್ಲಿ ಸ್ಪಷ್ಟ ರೂಪ ಪಡೆಯಿತು. ಈ ಚಳುವಳಿಯ ಉದ್ದೇಶ ಹೊಸ ಧರ್ಮವನ್ನು ಸ್ಥಾಪಿಸುವುದಲ್ಲ, ಇಸ್ಲಾಂ ಧರ್ಮದೊಳಗಿನ ಶಾಂತಿಯನ್ನು ನೆಲೆಸುವುದು. ದೇವಾಲಯಗಳ ಧ್ವಂಸದಿಂದ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಆಘಾತ ಉಂಟಾಯಿತು. ಇದರಿಂದ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ವೈಮನಸ್ಸು ಹೆಚ್ಚಾಯಿತು. ಧಾರ್ಮಿಕ ಮೇಲುಗೈ ಸಾಧಿಸುವಲ್ಲಿ ಪರಸ್ಪರ ದ್ವೇಷವೂ ಹೆಚ್ಚುತ್ತಾ ಹೋಯಿತು. ಈ ಪರಿಸ್ಥಿತಿಯಲ್ಲಿ ಸೂಫಿ ಮತ್ತು ಭಕ್ತಿ ಚಳುವಳಿಗಳು ದೇವರ ನಿಜಸ್ವರೂಪವನ್ನು ತಿಳಿಸುವಲ್ಲಿ. ಮತ್ತು ಜನರಲ್ಲಿ ಸಹೋದರತ್ವ, ಪ್ರೀತಿ ಮತ್ತು ಸ್ನೇಹವನ್ನು ಬೆಳೆಸಲು ಪ್ರಯತ್ನಿಸಿರುವುದು ಇತಿಹಾಸ.

ಈ ಎರಡೂ ಚಳುವಳಿಗಳ ಉದ್ದೇಶ ಸಮಾಜದಲ್ಲಿನ ಕೆಡುಕುಗಳು, ಮೂಢನಂಬಿಕೆಗಳು ಮತ್ತು ಅನ್ಯಾಯಗಳನ್ನು ದೂರ ಮಾಡುವುದು ಹಾಗೂ ಸಮಾನತೆ ಮತ್ತು ವಿಶ್ವಸಹೋದರತ್ವದ ತತ್ವಗಳನ್ನು ಬೋಧಿಸುವುದಾಗಿತ್ತು. ಸೂಫಿ ಸಂತರು ಸಮಾಜದಲ್ಲಿದ್ದ ಕಠಿಣ ಧಾರ್ಮಿಕ ಆಚರಣೆಗಳನ್ನು ವಿರೋಧಿಸಿದರು. ಅವರು ಹಿಂದೂಗಳೊಂದಿಗೆ ಪ್ರೀತಿ ಮತ್ತು ದಯೆಯಿಂದ

ವರ್ತಿಸಿದರು. ಇದರಿಂದಾಗಿ ಹಿಂದೂಗಳಲ್ಲಿಯೂ ಸೂಫಿ ಸಂತರ ಬಗ್ಗೆ ಅಪಾರ ಗೌರವ ಹೆಚ್ಚಾಯಿತು. ಹೀಗೆ ಭಾರತದಲ್ಲಿ ಹಿಂದೂ ಮತ್ತು ಸೂಫಿ ಪಂಥಗಳ ಸಾಮರಸ್ಯದಿಂದ ಭಾರತೀಯ ಸಂಸ್ಕೃತಿ ಇನ್ನಷ್ಟು ಉನ್ನತೀಕರಣ ಸಾಧಿಸಲು ಕಾರಣವಾದ ಕುರಿತು ಲೇಖನದಲ್ಲಿ ವಿವರಿಸುತ್ತದೆ.

ಸೂಫಿ ತತ್ವದ ಬಗ್ಗೆ- ವಿದ್ವಾಂಸರ ಅಭಿಪ್ರಾಯ

ಡಾ. ತಾರಾಚಂದ್ ಅವರ ಪ್ರಕಾರ, "ಸೂಫಿಸಂ ಸಂಕೀರ್ಣ ಹಾಗೂ ಸಂಯೋಜಿತ ಚಿಂತನೆಯಾಗಿದ್ದು, ಖುರಾನ್ ಮತ್ತು ಪ್ರವಾದಿ ಮಹಮ್ಮದ್ ಅವರ ಜೀವನದ ಜೊತೆಗೆ ಕ್ರೈಸ್ತ, ನವಪ್ಲೇಟೋನಿಸಂ, ಝೋರಾಸ್ಟ್ರಿಯನ್, ಹಿಂದೂ ಮತ್ತು ಬೌದ್ಧ ತತ್ವಗಳ ಸಂಯೋಗದಿಂದ ರೂಪುಗೊಂಡಿದೆ."

ಎಫ್. ಹ್ಯಾಡ್ಲೋನ್ ಡೇವಿಸ್ ಅವರ ಪ್ರಕಾರ, "ಸೂಫಿಸಂ ಪ್ರೀತಿ ಮತ್ತು ಕರುಣೆಯ ಮೂಲಕ ದೇವರನ್ನು ಅರಿಯುವ ಧರ್ಮವಾಗಿದ್ದು, ಇದು ಯಾವುದೇ ಕಟ್ಟುನಿಟ್ಟಾದ ಸಿದ್ಧಾಂತಕ್ಕೆ ಸೀಮಿತವಾಗಿಲ್ಲ."

ಪ್ರೊ. ಕೆ.ಡಿ. ಭಾರ್ಗವ್ "ಸೂಫಿಸಂ ಅನ್ನು ಪರಮ ಸೌಂದರ್ಯದ ಮೇಲಿನ ಪ್ರೀತಿಯಾಗಿ ವಿವರಿಸುತ್ತಾರೆ. ಅವರ ಪ್ರಕಾರ, ದೇವರೊಂದಿಗೆ ಏಕೀಕರಣವೇ ಇದರ ಮುಖ್ಯ ಗುರಿಯಾಗಿದೆ."

**ಸೂಫಿ ಚಿಂತನೆಯ ಮೂಲಗಳು ಮತ್ತು ಸಂಯೋಜನೆ**

ಸೂಫಿ ಚಿಂತನೆ ವಿವಿಧ ಧಾರ್ಮಿಕ ತತ್ವಗಳ ಸಂಯೋಜನೆಯಾಗಿದೆ. ಆರಂಭದಲ್ಲಿ ಅವರು ಕ್ರೈಸ್ತ ಸುವಾರ್ತೆಗಳಲ್ಲಿನ ಪ್ರೀತಿ, ತ್ಯಾಗ ಮತ್ತು ಸೇವಾಭಾವವನ್ನು ಸ್ವೀಕರಿಸಿದರೆ, ಇರಾನಿನ ಜರಾತುಷ್ಟ್ರ ಧರ್ಮದಿಂದ ನೈತಿಕತೆ ಮತ್ತು ಆತ್ಮಶುದ್ಧಿಯ ತತ್ವಗಳನ್ನು ಪಡೆದುಕೊಂಡರು. ಮಹಮ್ಮದ್ ಪೈಗಂಬರ್ ಅವರ ಆಧ್ಯಾತ್ಮಿಕ ಪ್ರೇರಣೆ ಮತ್ತು ಏಕೇಶ್ವರತೆಯ ತತ್ವವು ಸೂಫಿ ಚಿಂತನೆಗೆ ಮತ್ತಷ್ಟು ಗಾಢತೆ ನೀಡಿತು. ಆದರೆ ಸೂಫಿಸಂ ನಿಜವಾದ ಆಳವನ್ನು ಪಡೆದದ್ದು ಭಾರತದಲ್ಲಿ. ಇಲ್ಲಿನ ಉಪನಿಷತ್ತುಗಳ ಆತ್ಮತತ್ತ್ವ, ಅದ್ವೈತ ದರ್ಶನದ ಏಕತ್ವದ ಚಿಂತನೆ ಮತ್ತು ಯೋಗದ ಆಧ್ಯಾತ್ಮಿಕ ಸಾಧನೆಗಳು ಸೂಫಿ ಪರಂಪರೆಯನ್ನು ಆಂತರಿಕವಾಗಿ ಶ್ರೀಮಂತಗೊಳಿಸಿದವು. ಇವುಗಳಿಂದ ಸೂಫಿಗಳು ಆತ್ಮಸಾಕ್ಷಾತ್ಕಾರದ ದಾರಿಗೆ ಹೆಚ್ಚು ಒಲವು ತೋರಿದರು. ಸೂಫಿಸಂ ವಿವಿಧ ಸಂಸ್ಕೃತಿಗಳ ಸಂಗಮವಾದ ಆಧ್ಯಾತ್ಮಿಕ ಚಿಂತನೆ. ಭಾರತದಲ್ಲಿ ಶರಣರು, ನಾಥಪಂಥೀಯರು ಮತ್ತು ಭಕ್ತಿಪಂಥೀಯರೊಂದಿಗೆ ಸಂವಾದ ಸಹಜವಾಗಿ ನಡೆಯಿತು. ಕಬೀರ್ ಪಂಥ , ವಾರ್ಕರಿ ಪರಂಪರೆ ಮತ್ತು ಶರಣ ಚಳವಳಿಗಳೊಂದಿಗೆ ಸೂಫಿ ಚಿಂತನೆಗೆ ಆತ್ಮೀಯ ಸಂಬಂಧ ಬೆಳೆಯಿತು. ಇವೆಲ್ಲವೂಗಳ ಸಮಾಗಮನದಿಂದ ಸೂಫಿವಾದವು ಸ್ಥಳೀಯ ಸಂಸ್ಕೃತಿಯ ಭಾಗವಾಗಿ ರೂಪುಗೊಂಡಿತು.

**ಹಿಂದೂ ಮತ್ತು ಸೂಫಿ ಪಂಥಗಳ ತಾತ್ವಿಕ ಸಾಮರಸ್ಯ**

ಸೂಫಿ ಪಂಥವು ಇಸ್ಲಾಂ ಧರ್ಮದೊಳಗೆ ಬೆಳೆದ ಪಂಥವಾಗಿದ್ದು, ಅಲ್ಲಾಹನೊಂದಿಗೆ ನೇರ ಸಾಮೀಪ್ಯ ಹೊಂದಲು ತಪಸ್ಸು, ಧ್ಯಾನ ಮತ್ತು ವೈಯಕ್ತಿಕ ಅನುಭವಕ್ಕೆ ಮಹತ್ವ ನೀಡಿದರು. ಭಾವನಾತ್ಮಕ ಅನುಭವದ ಮೂಲಕ ನಿಗೂಢ ಮತ್ತು ಅಮೂರ್ತ ಸತ್ಯವನ್ನು ಅರಿಯಲು ಪ್ರಯತ್ನಿಸುತ್ತಿದ್ದರು. ಈ ಸಾಧನಾ ವಿಧಾನಗಳು ಹಿಂದೂ ಧರ್ಮದ ಭಕ್ತಿ ಪಂಥದ ಸಾಮ್ಯತೆಯನ್ನು ತೋರ್ಪಡಿಸುತ್ತದೆ. ಹೀಗಾಗಿ ಸೂಫಿ ಪಂಥವು ಭಾರತೀಯ ಸಂಸ್ಕೃತಿಯೊಂದಿಗೆ ಸಮ್ಮಿಲನಗೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ.

ಸೂಫಿಗಳು ಸಮಾನತೆ ಮತ್ತು ಸಹೋದರತ್ವದಲ್ಲಿ ನಂಬಿಕೆ ಇಟ್ಟುಕೊಂಡಿದ್ದರು. ಜಾತಿ ಮತ್ತು ಧರ್ಮದ ಅಡೆತಡೆಗಳು ಸಮಾಜದಲ್ಲಿ ಸಂಘರ್ಷ ಉಂಟುಮಾಡಿ ಸಾಮರಸ್ಯವನ್ನು ನಾಶಮಾಡುತ್ತವೆ ಎಂದು ಬಲವಾಗಿ ನಂಬಿದ್ದರು. ಆದ್ದರಿಂದ ಅವರು ಸ್ಥಳೀಯ ಪದ್ಧತಿಗಳು ಮತ್ತು ಸಂಪ್ರದಾಯಗಳನ್ನು ಅಳವಡಿಸಿಕೊಂಡು ಇಸ್ಲಾಂ ಧರ್ಮದ ಮೌಲ್ಯಗಳನ್ನು ಸ್ಥಳೀಯ ಸಮಾಜಕ್ಕೆ ಹೊಂದುವಂತೆ ಪರಿಚಯಿಸಿದರು. ಉಲೇಮಾಗಳಿಗಿಂತ ಭಿನ್ನವಾಗಿ, ಸೂಫಿಗಳು ಭಾರತೀಯ ಮುಖ್ಯವಾಹಿನಿಯಿಂದ ದೂರವಿರದೆ, ಸ್ಥಳೀಯ ಜೀವನದೊಂದಿಗೆ ಬೆರೆತು ಬದುಕಿದರು. ಅವರು ಸ್ಥಳೀಯ ಭಾಷೆಗಳನ್ನು ಕಲಿತು, ಜನರ ಮನಸ್ಸಿಗೆ ಹತ್ತಿರವಾದ ರೀತಿಯಲ್ಲಿ ಬೋಧನೆ ನಡೆಸಿದರು. ಅವರ ಬೋಧನೆಯ ಮೂಲ ಸಂದೇಶ ಪ್ರೀತಿ ಮತ್ತು ಸಾರ್ವತ್ರಿಕ ಸಹೋದರತ್ವವಾಗಿತ್ತು. ಕೆ. ಅಹ್ಮದ್ ನಿಜಾಮಿ ಹೇಳುವಂತೆ, "ಆಧ್ಯಾತ್ಮಿಕತೆ ಎಂದರೆ ಮಾನವೀಯತೆಯ ಸೇವೆಯಲ್ಲದೆ ಬೇರೇನೂ ಅಲ್ಲ" ಎಂಬ ತತ್ವವನ್ನು ಅನುಸರಿಸಿದರು.

ಇಸ್ಲಾಂ ಧರ್ಮ ಏಕ ತತ್ತ್ವಾವ ಆಧಾರಿತವಾಗಿದ್ದರೂ, ಹಲವು ಭಾಷೆಗಳು ಮತ್ತು ಸಂಸ್ಕೃತಿಗಳ ನಾಡಾದ ಭಾರತದಲ್ಲಿ ಸೂಫಿ ಪಂಥದ ಆಗಮನ ತೀವ್ರ ಸಮ್ಮಿಲನದಂತೆ ಪರಿಣಮಿಸಿತು. ಈ ಪಂಥವು ತನ್ನ ತಾತ್ವಿಕತೆಯನ್ನು ಉಳಿಸಿಕೊಂಡು, ಭಾರತೀಯ ಸಂಸ್ಕೃತಿಯೊಡನೆ ಏಕೀಭವವನ್ನು ಹೊಂದಿತು. ಯಾವುದೇ ಧರ್ಮವೂ ತನ್ನ ತತ್ವ ಉಳಿಸಿಕೊಂಡೇ ಇತರ ಧರ್ಮಗಳೊಂದಿಗೆ ಬೆರೆತುಕೊಳ್ಳುವುದು ಅಪರೂಪದ ಸಂಗತಿ. ಭಾರತವು ಇಂತಹ ಅಮೂಲ್ಯ ತತ್ವಗಳ ಅನುಮೋದನೆ ಮಾಡುವ ಮೂಲಕ ತನ್ನ ಧಾರ್ಮಿಕ ಸ್ಥಿರತೆಯನ್ನೂ, ಸಹಿಷ್ಣುತೆಯನ್ನೂ ಅಭಿವ್ಯಕ್ತಿಪಡಿಸಿತು.

ಭಕ್ತಿಯ ದಾರಿಯಲ್ಲಿ ಸಹ ಸಮಾನತೆ ಕಂಡುಬರುತ್ತದೆ. ಹಿಂದೂ ಪರಂಪರೆ ಶರಣ-ದಾಸರ ಮಾರ್ಗದಿಂದ ಭಕ್ತಿಯ ಮೌಲ್ಯವನ್ನು ಬೆಳಗಿಸಿದರೆ, ಸೂಫಿ ಪರಂಪರೆ ಧ್ವನಿಯ, ಜಿಕ್ರ್, ಸಮಾ ಮತ್ತು ಕಾವ್ಯ ರೂಪಗಳ ಮೂಲಕ ಆಧ್ಯಾತ್ಮದ ಸಂಪತ್ತನ್ನು ಹೆಚ್ಚಿಸುತ್ತದೆ. ಇಲ್ಲಿ ತಂತ್ರದಲ್ಲಿ ಭಿನ್ನತೆ ಇದ್ದರೂ, ತತ್ತ್ವದಲ್ಲಿ ಸಾಮರಸ್ಯವಿದೆ ಇವು ಎರಡೂ ದೇವರನ್ನು ಪ್ರೀತಿಯ ಮೂಲಕ ತಲುಪುವುದನ್ನೇ ಗುರಿಯಾಗಿಸಿಕೊಂಡಿವೆ. ಸಂಪೂರ್ಣ ಪ್ರೀತಿ ಮತ್ತು ಮಾನವೀಯತೆಯ ಸೇವೆ ಬಯಸುತ್ತವೆ. ಅವರ ಸಂದೇಶ ಏಕತೆ ಮತ್ತು ಪ್ರೀತಿ. ದೈವಿಕ ಜ್ಞಾನದ ಮೂಲಕ ಆಧ್ಯಾತ್ಮಿಕ ಮೌಲ್ಯಗಳಿಗೆ ಬದ್ಧರಾಗುವಂತೆ ಮಾಡುವುದು. ಹಾಗೂ ಧರ್ಮನಿಷ್ಠೆ ಮತ್ತು ದೇವರ ಸ್ಮರಣೆಯ ಪರಿಕಲ್ಪನೆಯನ್ನು ಸಾದರಪಡಿಸುವುದೇ ಆಗಿದೆ.

"ಮಾನವ ಸೇವೆಯೇ ಮಾಧವ ಸೇವೆ" ಎಂಬ ತತ್ವವು ಹಿಂದೂ ಧರ್ಮ ಮತ್ತು ಸೂಫಿ ಪಂಥ ಎರಡರಲ್ಲಿಯೂ ಕಂಡುಬರುವ ಸಾಮಾನ್ಯ ಮೌಲ್ಯವಾಗಿದೆ. ಮನುಷ್ಯರು ದೇವರ ಸೃಷ್ಟಿಯಾಗಿರುವುದರಿಂದ ಎಲ್ಲರನ್ನೂ ಸಮಾನವಾಗಿ ಕಾಣಬೇಕು ಎಂದು ಅವರು ಬೋಧಿಸಿದರು. ಬಡವರು, ಅನಾಥರು ಮತ್ತು ಹಿಂದುಳಿದವರಿಗೆ ಸಹಾಯ ಮಾಡುವುದು ದೇವರ ಸೇವೆಯ

ಸಮಾನವಾಗಿದೆ ಎಂದು ಅವರು ನಂಬಿದರು. ಅವರು ಧರ್ಮ, ಜಾತಿ, ವರ್ಗಗಳ ಭೇದವಿಲ್ಲದೆ ಎಲ್ಲರಿಗೂ ಸಹಾಯ ಮಾಡುತ್ತಿದ್ದರು. ಆದ್ದರಿಂದ, ಈ ತತ್ವವು ಧರ್ಮಭೇದಗಳನ್ನು ಮೀರಿ ಎಲ್ಲ ಮನುಷ್ಯರನ್ನು ಸಮಾನತೆಯನ್ನು ಕಾಣುವ ವಿಶ್ವಮಾನವೀಯ ಸಂದೇಶವನ್ನು ಜಗತ್ತಿಗೆ ನೀಡಿದೆ.

ದರ್ಗಾಗಳ ಜಾತ್ಯಾತೀತ ಸ್ವರೂಪದಿಂದ ಎರಡೂ ಧರ್ಮಗಳು ಅದನ್ನು ಸ್ವೀಕರಿಸಿವೆ. ಅಮೂರ್ತ ದೇವರನ್ನು ಶಿಸ್ತು ಮೂಲಕ ಕಾಣುವ ಧಾರ್ಮಿಕತೆಗಿಂತ ಜನರು ಮುಕ್ತವಾಗಿ ತಮ್ಮ ಕಷ್ಟ ಸುಖಗಳನ್ನು ಅಭಿವ್ಯಕ್ತಿಗೊಳಿಸುವ ಧಾರ್ಮಿಕ ಸ್ವಾತಂತ್ರ್ಯ ಅವಶ್ಯಕವೆನಿಸುತ್ತದೆ. ಉರುಸ್ ಹಾಗೂ ಮೊಹರಂ ಹಬ್ಬಗಳು ಎರಡೂ ಸಂಸ್ಕೃತಿಯವರು ಮೂಲ ಧರ್ಮದ ಹಬ್ಬದ ಆಚರಣೆಗಿಂತ ಕ್ರಿಯಾಶೀಲರಾಗಿ ಭಾಗವಹಿಸುತ್ತಾರೆ. ವಾಸ್ತವವಾಗಿ ಸೂಫಿಸಂ ಮತ್ತು ಮೊಹರಂ ಭಾರತಕ್ಕೆ ಪರ್ಶಿಯಾದಿಂದ ಜೊತೆಯಾಗಿ ಬಂದಿವೆ. ಶಿಯಾ ಪಂಥಿಗಳಾದ ಬಹಮನಿ ಹಾಗೂ ಆದಿಲ್ ಶಾಹಿ ದೊರೆಗಳು ಪರ್ಶಿಯಾದಿಂದ ಸೂಫಿಗಳನ್ನು ಕರೆಸಿ ಮೊಹರಂ ಹಬ್ಬ ಆಚರಿಸುತ್ತಿದ್ದರು. ಉದಾರವಾಗಿಯಾಗಿದ್ದ ಎರಡನೇ ಇಬ್ರಾಹಿಂ ಆದಿಲ್ ಷಾ ಮೊಹರಂ ಆಚರಣೆಗಳನ್ನು ನಿರ್ಬಂಧಿಸಲಿಲ್ಲ. ಮೊಹರಂ ಆಚರಣೆ ಕುರಿತು ಮುಸ್ಲಿಂ ರಾಷ್ಟ್ರಗಳಲ್ಲಿ ವೈಮನಸ್ಯವಿದ್ದರೂ, ಕರ್ನಾಟಕದಲ್ಲಿ ಸುನ್ನಿ-ಶಿಯಾ ಭೇದವಿಲ್ಲದೆ ಮೊಹರಂ ಸಾರ್ವಜನಿಕ ಹಬ್ಬವಾಗಿ ಆಚರಿಸಲಾಗುತ್ತದೆ. ಖ್ವಾಜಾ ಮೊಯಿನುದ್ದೀನ್ ಚಿಸ್ತಿ, ಬಾಬಾ ಫರೀದ್ ಮತ್ತು ನಿಜಾಮುದ್ದೀನ್ ಔಲಿಯಾ ಇತರೆ ಪ್ರಮುಖ ಸೂಫಿ ಸಂತರು ಇಂದಿಗೂ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳಿಂದ ಗೌರವಿಸಲ್ಪಡುತ್ತಾರೆ. ಅವರ ದರ್ಗಾಗಳು ಎರಡೂ ಸಮುದಾಯಗಳಿಗೆ ಯಾತ್ರಾ ಕೇಂದ್ರಗಳಾಗಿರುವುದು ಕಂಡುಬರುತ್ತದೆ.

ಉತ್ತರ ಕರ್ನಾಟಕದ ಆಂಧ್ರಗಡಿ ಭಾಗದಲ್ಲಿ ಹಿಂದುಗಳು ಸಹ ಸೂಫಿ ಪಂಥದ ಪ್ರಭಾವಕ್ಕೆ ಒಳಗಾಗಿ ತಮ್ಮ ಇಷ್ಟ ಕಾರ್ಯ ಸಿದ್ಧಿ ಫಲವಾಗಿ ಸೂಫಿ ಸಂತರ ಹೆಸರುಗಳನ್ನು ಇಟ್ಟುಕೊಳ್ಳುತ್ತಾರೆ ಉದಾ: ಮಸ್ತಾನ್, ಶೇಕಮ್ಮ, ಶೇಕಪ್ಪ, ಕುಳ್ಳಾಯಪ್ಪ, ಹುಸೇನಪ್ಪ ಇತ್ಯಾದಿ. ಮೊಹರಂ ಹಬ್ಬದಲ್ಲಿ ಸಕ್ಕರೆ ನೀಡುವುದು, ದೇವರಿಗೆ ಕಾಣಿಕೆಗಳನ್ನು ಸಲ್ಲಿಸುವುದು, ತುಲಾಭಾರ, ದೇವರನಾಮ ಸ್ಮರಣೆ ಮಾಡಿಕೊಳ್ಳುತ್ತಾ ಅಗ್ನಿಕುಂಡದಲ್ಲಿ ನಡೆಯುವುದು, ಮೊಹರಂ ದೇವರ ಮೆರವಣಿಗೆಯಲ್ಲಿ ಭಾಗವಹಿಸುವುದು, ಮೊಹರಂನ ಹಬ್ಬದ ಆರಂಭಿಕ ಧಾರ್ಮಿಕ ಆಚರಣೆಗಳು ಹಿಂದೂಗಳ ಮನೆಯಿಂದ ಪ್ರಾರಂಭವಾಗುವುದು, ಬಂಧು-ಮಿತ್ರರೊಡನೆ ವಿಜೃಂಭಣೆಯಿಂದ ಹಬ್ಬದ ಆಚರಣೆ ಮಾಡುವುದನ್ನು ಗಮನಿಸಿದರೆ ಭಾರತೀಯ ಸಂಸ್ಕೃತಿಯಲ್ಲಿ ಹಿಂದೂ ಮುಸ್ಲಿಂ ಸಾಮರಸ್ಯಕ್ಕೆ ಮೊಹರಂ ಹಬ್ಬ ಮುಕುಟ ಸ್ಥಾನ ಪಡೆದಿದೆ.

ಹಿಂದೂ ತತ್ತ್ವಶಾಸ್ತ್ರದ "*ಅಹಂ ಬ್ರಹ್ಮಾಸ್ಮಿ*" ಮತ್ತು ಸೂಫಿಯ "*ಅನಲ್ ಹಕ್*" ಎರಡೂ ತತ್ವಗಳು ವ್ಯಕ್ತಿಯ ಒಳಗೆ ದೇವತ್ವವಿರುವುದನ್ನು ಸಾಬೀತುಪಡಿಸುತ್ತವೆ. ಇವು ನಾವು ದೈನಂದಿನವಾಗಿ ಅನುಭವಿಸುವ ದ್ವೈತ ಭಾವವನ್ನು ಮೀರಿಸಿ, ಆತ್ಮ ಮತ್ತು ಪರಮಾತ್ಮನ ಪರಮ ಏಕತೆಯನ್ನು ಸಾರುವ ತತ್ತ್ವಪಥಗಳಾಗಿವೆ.-

ಸಾಮವೇದದಲ್ಲಿ ದೇವರನ್ನು ಪ್ರಾರ್ಥಿಸುವ ಮಾಧ್ಯಮವಾಗಿ ಸಂಗೀತವು ಕೇಂದ್ರಬಿಂದುವಾಗಿ ರೂಪುಗೊಂಡಿದೆ ವೇದ ಪರಂಪರೆಯಲ್ಲಿ ಸಂಗೀತದ ಮೂಲಕ ದೈವಿಕ ತತ್ತ್ವವನ್ನು ತಲುಪುವ ಯತ್ನವು, ಭಕ್ತಿಯ ಅಂತರ್ಬೋಧನೆಗೆ ದಾರಿತೆರೆದಿದೆ ಎಂಬ ನಂಬಿಕೆಯಿದೆ. ಈ ಹಿನ್ನೆಲೆಯಲ್ಲಿ, ಇಸ್ಲಾಮ್ ಧರ್ಮದಲ್ಲಿ ಪ್ರವಾದಿ ಮಹಮ್ಮದ್ ಅವರ ನಿಧನ ನಂತರ ಮೊದಲ ಖಲೀಫರಾಗಿದ್ದ ಅಬೂಬಕರರು "ಸಮಾ" ಎಂಬ ಶಬ್ದದ ಅಡಿಯಲ್ಲಿ ಸಂಗೀತವನ್ನು ಸೈತಾನನ ವಾಣಿ ಎಂದು ಖಂಡಿಸಿದ್ದು ಗಮನಾರ್ಹವಾಗಿದೆ.

ಇದರಿಂದಾಗಿ, ಇಸ್ಲಾಮಿಕ್ ಧರ್ಮದಲ್ಲಿ ಸಂಗೀತದ ಸ್ಥಾನ ಪ್ರಶ್ನೆಗೆ ಒಳಪಟ್ಟಿತು. ಆದರೆ, ಸೂಫಿಪಂಥವು ಭಿನ್ನ ಧಾರ್ಮಿಕ ಅನುಭವದ ಮಾರ್ಗವನ್ನೇ ನಿರ್ವಹಿಸುತ್ತದೆ. ಸೂಫಿಗಳು ಭಾವನಾತ್ಮಕ ಅನುಭವದ ಮೂಲಕ ದೈವೀಕ ಸಾನ್ನಿಧ್ಯವನ್ನು ಅನುಭವಿಸಲು ಸಂಗೀತವನ್ನು ಅತ್ಯಂತ ಶ್ರೇಷ್ಠ ಸಾಧನವೆಂದು ಪರಿಗಣಿಸಿದ್ದಾರೆ. ಅವರು ಕೇವಲ ಸಂಗೀತ ಪ್ರೇಮಿಗಳಷ್ಟೆ ಅಲ್ಲ, ಆಧ್ಯಾತ್ಮಿಕ ಭಾವನೆಯನ್ನು ಜನರ ಮನಸ್ಸಿನಲ್ಲಿ ಸೌಮ್ಯವಾಗಿ ಹರಡುವ ನಿಟ್ಟಿನಲ್ಲಿ ಸಂಗೀತದ ಶಕ್ತಿಯನ್ನು ಸದ್ಭಾವ ಪೂರ್ಣವಾಗಿ ಉಪಯೋಗಿಸಿದ್ದಾರೆ. ಜನಭಾಷೆಯಲ್ಲಿಯೇ ಕಾವ್ಯ ರಚನೆ ಮಾಡುವ ಮೂಲಕ, ಹಾಗೂ ಭಕ್ತಿಭಾವದ ಉನ್ನತಿಗಾಗಿ ಖವಾಲಿ ಅಥವಾ ಸ್ಮರಣ ಗಾನಗಳ ಮೂಲಕ ದೈವಿಕತೆಯನ್ನು ವ್ಯಕ್ತಪಡಿಸಿ ಭಾರತೀಯ ಸಾಂಸ್ಕೃತಿಯ ಸಮ್ಮಿಲನದ ಪ್ರಕ್ರಿಯೆಯಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿದ್ದಾರೆ. ತಮ್ಮದೇ ಆದ ಪ್ರದೇಶಗಳಲ್ಲಿ ಅವರು ಸಂಗೀತದ ಮೂಲಕ ಅನುಭವವನ್ನೇ ಪ್ರಸಾರಗೊಳಿಸಿ ಜನಮನದ ಪರಿಕಲ್ಪನೆಗಳಲ್ಲಿ ಆಳವಾಗಿ ಬೇರೂರಿದರು.

**"ಕಿತಾಬ್-ಎ-ನವರಸ್": ಧಾರ್ಮಿಕ ಸಾಮರಸ್ಯದ ಪ್ರತಿಬಿಂಬ**

ಬಿಜಾಪುರದ ಸುಲ್ತಾನ ಎರಡನೇ ಇಬ್ರಾಹಿಂ ಆದಿಲ್ ಶಾಹ 'ಕಿತಾಬ್-ಎ-ನವರಸ್' ಕಾವ್ಯ ರಚಿಸಿ ಹಿಂದೂ ಧರ್ಮ ಸಹಿಷ್ಣುತೆಯ ಪರಾಕಾಷ್ಠೆಯನ್ನು ಮೆರೆದಿದ್ದಾರೆ. "ಜಗದ್ಗುರು" ಎಂಬ ಬಿರುದು ಸಹ ಪಡೆದುಕೊಂಡಿದ್ದಾನೆ. ಈ ಕೃತಿಯು ಸರಸ್ವತಿ ಆವಾಹನದಿಂದ ಪ್ರಾರಂಭವಾಗಿದ್ದು ಮೊದಲ ದ್ವಿಪದಿಯು ಸರಸ್ವತಿಯನ್ನು ಕುರಿತಾಗಿದೆ.

ನೌರಸ ಸೂ ಜುಗ ಜಗಜ್ಯೋತಿ ಅಣು ಸರೋಗಿನಿ ।

ಯೂ ಸತ್ ಸರಸುತೀ ಮಾತಾ ಇಬ್ರಾಹಿಮ ಪರಸಾದ ಭ ಈ ದೂನೀ।

ಹೇ ತಾಯಿ ಸರಸ್ವತಿ ಇಬ್ರಾಹಿಂನ ಮೇಲೆ ನಿನ್ನ ಕೃಪೆ ಇರಲಿ, ನಿನ್ನ ಕೃಪೆಯಿಂದ ಆತನ ನವರಸ ಕಾವ್ಯವು ಜಗತ್ತಿನಲ್ಲಿ ಬಹುಕಾಲ ಬಾಳುತ್ತದೆ'

ಹಿಂದೂ-ಮುಸ್ಲಿಂ ಬೇಧ-ಭಾವ ಸಲ್ಲದು ಎನ್ನುವ ತನ್ನ ವಿಚಾರವನ್ನು ಈ ಕೆಳಗಿನಂತೆ ಅತ್ಯಂತ ಸುಂದರವಾಗಿ ಹೇಳುತ್ತಾರೆ.

ಭಾಕಾ ನ್ಯಾರಿ ನ್ಯಾರೀ ಭಾವ ಏಕ ಕಹಾ ತುರುಕ ಕಹಾ ಬರಹಾಮನ ।

ಉತ್ತಮ ಭಾಗನಿಕೋ ಸೋ ಸೋಹಿ ಜಾ ಸರಸುತೀ ಹು ಈ ಪ್ರಸನ್ನ ।

ಇಬ್ರಾಹಿಮ ಸೊಂಸಾರ ಚಾಹೆ, ವಿದ್ಯ, ಸಬದ, ಗುರು ಸೇವಾ ಜಪಕರ ಏಕಮನ

ಭಾಷೆ ಬೇರೆ ಬೇರೆಯಾದರೇನೂ ಅವುಗಳ ಭಾವ ಒಂದೇ. ಅವರು ತುರುಕರಾಗಲಿ, ಬ್ರಾಹ್ಮಣರಾಗಲಿ ಉತ್ತಮರಾಗಿದ್ದರೆ ಅವರಿಗೆ ಸರಸ್ವತಿ ಒಲಿಯುತ್ತಾಳೆ. ಅಂತೆಯೇ ಇಬ್ರಾಹಿಂನು ವಿದ್ಯೆ, ಸಂಗೀತ ಹಾಗೂ ಗುರುಸೇವೆಯನ್ನು ಬಯಸುತ್ತಾನೆ.ಅವುಗಳಿಗಾಗಿ ಏಕಾಗ್ರಚಿತ್ತನಾಗಿ ಜಪಮಾಡುತ್ತಾನೆ.

ಇದಕ್ಕೆ ಅಕ್ಬರ್ ಅವರ ದೀನ್-ಇ-ಇಲಾಹಿ ತತ್ವ, ಷಿಯಾ ಪಂಥದ ಪ್ರಭಾವ, ಸೂಫಿ ಚಿಂತನೆಗಳು ಹಾಗೂ ಹಿಂದೂ ಸಮುದಾಯಗಳೊಂದಿಗೆ ಹೊಂದಿದ್ದ ಉತ್ತಮ ಸಂಬಂಧ ಪ್ರಮುಖ ಕಾರಣಗಳಾಗಿವೆ. ಇಬ್ರಾಹಿಂ ಆದಿಲ್ ಶಾಹ್ ಅವರು ಸಾಮರಸ್ಯದ ನಿಲುವನ್ನು ಅನುಸರಿಸಿ, ಸಂಗೀತ ಮತ್ತು ಸಂಸ್ಕೃತಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಈ ಉದ್ದೇಶಕ್ಕಾಗಿ ಅವರು ನವರಸಪುರ ಎಂಬ ನಗರವನ್ನು ನಿರ್ಮಿಸಿದರು. ಹಿಂದೂ ಮತ್ತು ಮುಸ್ಲಿಂರು ಪ್ರತಿ ತಿಂಗಳ ಗುರುವಾರದಂದು "ಈದ್-ಎ-ನವರಸ್" ಎಂಬ ಹೆಸರಿನಲ್ಲಿ ರಾಷ್ಟ್ರೀಯ ಹಬ್ಬ ಆಚರಿಸಲು ರಾಜಾಜ್ಞೆಯಾಗಿತ್ತು, ಇದು ಅವರ ಸಮನ್ವಯಾತ್ಮಕ ಮತ್ತು ಧಾರ್ಮಿಕ ಸಾಮರಸ್ಯದ ದೃಷ್ಟಿಕೋನವನ್ನು ತೋರಿಸುತ್ತದೆ.

**ಗುರು-ಶಿಷ್ಯ ಪರಂಪರೆ ಮೂಲಕ ಭಾಂಧ್ಯವ್ಯ ಬೆಸೆದಿರುವುದು**

ಗುರು-ಶಿಷ್ಯ ಪರಂಪರೆ ಸನಾತನ ಧರ್ಮದಲ್ಲಿ ಆಧ್ಯಾತ್ಮಿಕ ಸಾಧನೆಯ ಮೂಲಭೂತ **ಆಧಾರವಾಗಿದೆ.** ಇದೇ ಪರಿಕಲ್ಪನೆ ಸೂಫಿ ಸಂಪ್ರದಾಯದಲ್ಲಿ "ಪೀರ್-ಮುರೀದ್" ಸಂಬಂಧವಾಗಿ ವ್ಯಕ್ತವಾಗುತ್ತದೆ. ಹಿಂದೂ ಹಾಗೂ ಸೂಫಿ ಪರಂಪರೆಗಳಲ್ಲಿ ಗುರುವಾರವನ್ನು ವಿಶೇಷವಾಗಿ ಗೌರವಿಸುವುದು, ಗುರುತತ್ವದ ಮಹತ್ವವನ್ನು ಪ್ರತಿಪಾದಿಸುತ್ತದೆ. ಇಲ್ಲಿ "ಗುರು" ಎಂದರೆ ಅಜ್ಞಾನವನ್ನು ನಿವಾರಿಸಿ, ಸತ್ಯದ ಅರಿವಿಗೆ ದಾರಿ ತೋರಿಸುವ ಆತ್ಮೀಯ ಮಾರ್ಗದರ್ಶಿ. ಈ ಸಂಬಂಧವು ಧರ್ಮ, ಭಾಷೆ ಮತ್ತು ಪ್ರದೇಶಗಳ ಮಿತಿಗಳನ್ನು ಮೀರಿ, ಮಾನವೀಯ ಆಧ್ಯಾತ್ಮಿಕ ಅನುಭವದ ಸಾಮಾನ್ಯತೆಯನ್ನು ಸೂಚಿಸುತ್ತದೆ. ಎರಡೂ ಸಂಪ್ರದಾಯಗಳಲ್ಲಿ ವ್ಯಕ್ತಿಯ ಅಹಂಕಾರವನ್ನು ಕಡಿಮೆ ಮಾಡಿ, ವಿನಯ, ಭಕ್ತಿ ಮತ್ತು ಪ್ರೀತಿಯ ಮೂಲಕ ದೈವದ ಅರಿವಿಗೆ ತಲುಪುವ ಮಾರ್ಗವನ್ನು ಸೂಚಿಸುತ್ತದೆ. ಗುರುವಿನ ಪಾತ್ರವು ಶಿಷ್ಯನ ಒಳಜೀವನವನ್ನು ಪರಿವರ್ತಿಸಿ, ಅವನನ್ನು ಉನ್ನತ ಚೈತನ್ಯಕ್ಕೆ ಕರೆದೊಯ್ಯುವಂತದ್ದು.

ಸೂಫಿಸಂನಲ್ಲಿ ಪೀರ್‌ರ ಮಾರ್ಗದರ್ಶನವಿಲ್ಲದೆ ಆಧ್ಯಾತ್ಮಿಕ ಪಯಣ ಪೂರ್ಣವಾಗುವುದಿಲ್ಲವೆಂದು ನಂಬಲಾಗುತ್ತದೆ. ಗುರುವನ್ನು ಆಯ್ಕೆಮಾಡುವುದು, ಅವರಿಂದ ದೀಕ್ಷೆ ಪಡೆಯುವುದು ಮತ್ತು ಅವರ ಆದೇಶಗಳನ್ನು ಪಾಲಿಸುವುದು ಸಾಧಕರ ಜೀವನದಲ್ಲಿ ಪ್ರಮುಖ ಹಂತಗಳಾಗಿವೆ. ಶಿಷ್ಯರು ತಮ್ಮ ನಿಷ್ಠೆಯನ್ನು ಸಾಬೀತುಪಡಿಸಲು ವಿವಿಧ ಪರೀಕ್ಷೆಗಳನ್ನು ಎದುರಿಸುವುದು ಸಹ ಈ ಪರಂಪರೆಯ ಅವಿಭಾಜ್ಯ ಅಂಗವಾಗಿದೆ. ಇನ್ನೊಂದೆಡೆ, ಸಂಪ್ರದಾಯಬದ್ಧ ಇಸ್ಲಾಂ ದೇವರ ಏಕತ್ವವನ್ನು ಅತ್ಯಂತ ಕಠಿಣವಾಗಿ ಒತ್ತಿ ಹೇಳುತ್ತದೆ. ಈ ಕಾರಣದಿಂದ, ಮಾನವನಿಗೆ ಮಣಿಯುವ ಕ್ರಿಯೆಯನ್ನು ಕೆಲವು ವಲಯಗಳು ವಿರೋಧಿಸುತ್ತವೆ. ಆದರೆ ಸೂಫಿ ದೃಷ್ಟಿಯಲ್ಲಿ, ಪೀರ್‌ಗೆ ಸಲ್ಲಿಸುವ ಗೌರವವು ದೇವರತ್ತ ಸಾಗುವ ಮಾರ್ಗದ ಒಂದು ಅಂಗವಾಗಿದ್ದು, ಅದು ದೇವಭಕ್ತಿಗೆ ವಿರುದ್ಧವಲ್ಲ; ಬದಲಾಗಿ ದೈವಾನುಭವವನ್ನು ಸುಲಭಗೊಳಿಸುವ ಸಾಧನವಾಗಿದೆ.

ಕರ್ನಾಟಕದ ಅನೇಕ ಅನುಭವಿ ಸಂಪ್ರದಾಯಗಳಲ್ಲಿ ಗುರು ಶಿಷ್ಯರ ಸಂಬಂಧಗಳು ಧಾರ್ಮಿಕವಾಗಿ ಅನ್ಯ ಎನ್ನಲಾಗುವ ವ್ಯಕ್ತಿಗಳ ನಡುವೆ ಏರ್ಪಟ್ಟಿದೆ. ನಾಸಿರುದ್ದೀನ್-ಸಿದ್ದಲಿಂಗ, ಬಂದೇನವಾಜ್ –ಶರಣಬಸವೇಶ್ವರ, ಗುಡೇಕಲ್ ಹುಸೇನ್ ಪೀರ – ನಾಗಲಿಂಗಸ್ವಾಮಿ, ಶೇಕ್ಷವಲ್ಲಿ –ಗಾದಿಲಿಂಗ, ಅಲ್ಲಿ ಸಾಬುರು -ಶಿವಪ್ಪ ಕಡಿಕೋಳ, ಮಡಿವಾಳಪ್ಪ ಚನ್ನೂರು- ಜಲಾಲ್ ಸಾಬು, ಕೂಡಲೂರು ಸಿದ್ದಲಿಂಗ -ಸಾಯಿ ಬಣ್ಣ ತಾತ, ಗೋವಿಂದ ಭಟ್ಟ- ಶಿಶುನಾಳ ಷರೀಫರ ಬಾಂಧವ್ಯವನ್ನು ಉಲ್ಲೇಖಿಸಬಹುದು. ಇವರಲ್ಲಿ ಗುರು ಸೇವೆ ಮಾಡಿ ಅಥವಾ ಗುರು ಒಡ್ಡಿದ ಪರೀಕ್ಷೆಯಲ್ಲಿ ಗೆದ್ದು ಶಿಷ್ಯತ್ವವನ್ನು ಪಡೆದವರಿದ್ದಾರೆ. ಈ ಗುರು ಶಿಷ್ಯ

ಸಂಬಂಧಗಳು ಜನ್ಮಾಂತರದಲ್ಲೂ ಮುಂದುವರೆಯುವುದೆಂಬ ನಂಬಿಕೆ ಇದೆ. ಇವರಲ್ಲಿ ಸೂಫಿ ಗುರುವಿನ ಶಿಷ್ಯ ಹಿಂದೂ ಆಗಿ, ಹಿಂದೂ ಗುರುವಿನ ಶಿಷ್ಯ ಸೂಫಿಗಳಾಗಿ ಕಂಡು ಬರುವುದು ಸಾಮಾರಸ್ಯದ ಪ್ರತಿಬಿಂಬಿವಾಗಿದೆ.

ಕೊಡೇಕಲ್ ಬಸವಣ್ಣ, ತಿಂತಿಣಿ ಮೋನಪ್ಪಯ್ಯ ಮತ್ತು ಶಿರಹಟ್ಟಿ ಫಕೀರೇಶರ ಪರಂಪರೆಗಳು ಹಿಂದೂ-ಸೂಫಿ ಸಾಮರಸ್ಯದ ಮಹತ್ವದ ಉದಾಹರಣೆಗಳಾಗಿವೆ. ಕೊಡೇಕಲ್ ಪರಂಪರೆಯಲ್ಲಿ ಶರಣ ಮತ್ತು ಸೂಫಿ ಚಿಂತನೆಗಳು ಒಂದಾಗಿ ಸೇರಿ, ಬಾಹ್ಯ ಆಚರಣೆಗಳಿಗಿಂತ ಆತ್ಮಾನುಭವಕ್ಕೆ ಆದ್ಯತೆ ನೀಡಲಾಗಿದೆ. ನಿರಾಕಾರ ಬ್ರಹ್ಮ ಮತ್ತು ಅಲ್ಲಾಹ ತತ್ವಗಳ ಏಕತೆ ಇಲ್ಲಿ ಸ್ಪಷ್ಟವಾಗುತ್ತದೆ. ತಿಂತಿಣಿ ಮೋನಪ್ಪಯ್ಯನ ಪರಂಪರೆಯಲ್ಲಿ ಎರಡೂ ಧರ್ಮಗಳ ತತ್ವಗಳು ಹಾಗೂ ಪದಪ್ರಯೋಗಗಳು ಸಹಜವಾಗಿ ಸಮನ್ವಯಗೊಂಡಿವೆ. ಅವರು ಆಚರಣಾತ್ಮಕ ಅತಿರೇಕಗಳನ್ನು ವಿಮರ್ಶಿಸಿ, ಅಂತರಂಗದ ಸತ್ಯ ಮತ್ತು ಸಮಾನ ಆಧ್ಯಾತ್ಮಿಕ ಹಕ್ಕುಗಳನ್ನು ಒತ್ತಿ ಹೇಳುತ್ತಾರೆ. ಶಿರಹಟ್ಟಿ ಫಕ್ಕೀರೇಶರರ ಪರಂಪರೆಯಲ್ಲಿ ಗುರು-ಶಿಷ್ಯ ಸಂಬಂಧದ ಮೂಲಕ ಧರ್ಮಗಳ ನಡುವಿನ ಗಡಿಗಳನ್ನು ಮೀರಿ ಆಧ್ಯಾತ್ಮಿಕ ಏಕತೆ ವ್ಯಕ್ತವಾಗುತ್ತದೆ. ಸೂಫಿ ಮತ್ತು ಲಿಂಗಾಯತ ಪರಂಪರೆಗಳ ಆಚರಣೆಗಳು ಒಂದೇ ಸಮಯದಲ್ಲಿ ಮುಂದುವರಿಯುವುದು ಸಮನ್ವಯತೆಯ ಜೀವಂತ ರೂಪವಾಗಿದೆ.

ಆವಳಗಿ ಶಿವಲಿಂಗನು ಸೂಫಿ ಸಂತ ಬಂದೇನವಾಜ್ ಅವರಿಂದ ಟೊಪ್ಪಿಗೆಯನ್ನು ಪಡೆದಿರುವುದು ಗುರು-ಶಿಷ್ಯ ಸಂಬಂಧವು ಧಾರ್ಮಿಕ ಗಡಿಗಳನ್ನು ಮೀರಿ ಆಧ್ಯಾತ್ಮಿಕ ಸಂಬಂಧವಾಗಿ ರೂಪುಗೊಂಡಿರುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಈ ದೀಕ್ಷೆಯ ಸಂಕೇತವಾಗಿ ಹಳದಿ ಟೊಪ್ಪಿಗೆಯನ್ನು ಶಿಷ್ಯರು ಇಂದಿಗೂ ಧರಿಸುವುದು ಪರಂಪರೆಯ ನಿರಂತರತೆಯನ್ನು ಸೂಚಿಸುತ್ತದೆ.

ಬಿಜಾಪುರದ ಅಮೀನುದ್ದೀನ್, ಕೌತಾಳದ ಖಾದರಲಿಂಗ ಹಾಗೂ ಬಾಬಾಬುಡನ್‌ಗಿರಿಯ ದರ್ಗಾಗಳಲ್ಲಿ ಕಾವಿ ವೇಷ ಧರಿಸುವ ಪದ್ಧತಿಗಳು ವಿಭಿನ್ನ ಧಾರ್ಮಿಕ ಸಂಪ್ರದಾಯಗಳು ಪರಸ್ಪರ ಹಾಸುಹೊಕ್ಕಿಕಾಗಿರುವುದು ತೋರಿಸುತ್ತವೆ. ಇಲ್ಲಿ ಬಣ್ಣ ಅಥವಾ ವೇಷಭೂಷಣ ಎಂಬ ಭೇದಕ್ಕಿಂತ, ಇವು ಒಂದೇ ಆಧ್ಯಾತ್ಮಿಕ ವಲಯದಲ್ಲಿ ಸೇರಿ ಕಾಣಿಸಿಕೊಳ್ಳುವುದೇ ಮಹತ್ವದ್ದು. ಇಂತಹ ಅಸ್ತಿತ್ವವು ಧರ್ಮಗಳ ನಡುವಿನ ಭಿನ್ನತೆಯನ್ನು ಕಡಿಮೆ ಮಾಡಿ, ಪರಸ್ಪರ ಗೌರವ ಮತ್ತು ಒಗ್ಗಟ್ಟಿನ ಭಾವನೆಯನ್ನು ಬಲಪಡಿಸುತ್ತದೆ. ಸೂಫಿ ಮತ್ತು ಹಿಂದೂ ಪರಂಪರೆಗಳ ನಡುವೆ ಇರುವ ಈ ರೀತಿಯ ವೇಷಭೂಷಣ, ದೀಕ್ಷಾ ಪದ್ಧತಿ ಮತ್ತು ಆಚರಣೆಗಳ ಹಂಚಿಕೆ, ಸಂಸ್ಕೃತಿಯ ಸಮನ್ವಯತೆ ಮಾತ್ರವಲ್ಲ, ಆಧ್ಯಾತ್ಮಿಕ ಏಕತೆಯನ್ನೂ ಸೂಚಿಸುತ್ತದೆ. ಈ ಪರಂಪರೆಗಳು ಧರ್ಮಗಳನ್ನು ವಿಭಜಿಸುವುದಕ್ಕಿಂತ, ಅವುಗಳನ್ನು ಒಗ್ಗೂಡಿಸುವ ಸೇತುವೆಗಳಾಗಿ ಕಾರ್ಯನಿರ್ವಹಿಸುತ್ತವೆ.

**ಉಪ ಸಂಹಾರ**

ಭಾರತೀಯ ಸಂಸ್ಕೃತಿಯ ತತ್ವಗಳು ಕೇವಲ ಪುಸ್ತಕಗಳಲ್ಲಿ ಉಳಿದಿರುವ ಸಿದ್ಧಾಂತಗಳಲ್ಲ; ಅವು ಜೀವನವನ್ನು ದಾರಿದೀಪದಂತೆ ಮುನ್ನಡೆಸುವ ಜೀವಂತ ಮೌಲ್ಯಗಳಾಗಿವೆ. ವಿಭಿನ್ನ ಸಂಸ್ಕೃತಿಗಳು ಭಾರತಕ್ಕೆ ಬಂದು ಇಲ್ಲಿ ಸಹಜವಾಗಿ ಬೆರೆತುಹೋಗಿರುವುದು, ಈ ಸಂಸ್ಕೃತಿಯ ವಿಶಾಲತೆ ಮತ್ತು ಸ್ವೀಕಾರಾರ್ಹತೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ; ಇದರ ಫಲವಾಗಿ ವಿವಿಧ ಪರಂಪರೆಗಳ ಧರ್ಮಾಚರಣೆ, ಸಂಸ್ಕೃತಿ ಮತ್ತು ನೈತಿಕ ಮೌಲ್ಯಗಳು ಒಂದಾಗಿ ಸೇರಿ ಭಾರತೀಯ ಸಂಸ್ಕೃತಿಯನ್ನು

ಅನನ್ಯ ಹಾಗೂ ಶಾಶ್ವತವಾಗಿಸಿವೆ. ಇದೇ ಹಿನ್ನೆಲೆಯಲ್ಲಿಯೇ, ಹಿಂದೂ ಮತ್ತು ಸೂಫಿ ಪರಂಪರೆಗಳ ಧಾರ್ಮಿಕ ಮಾರ್ಗಗಳು ವಿಭಿನ್ನವಾಗಿದ್ದರೂ, ಮನುಷ್ಯನ ಒಳಗಿನ ದೈವಿಕತೆಯನ್ನು ಅರಿಯುವ ಒಂದೇ ಸಂದೇಶವನ್ನು ಸಾರುತ್ತವೆ; ಹೀಗಾಗಿ ಹಿಂದೂ-ಸೂಫಿ ಸಾಮರಸ್ಯವು ಬಾಹ್ಯ ಆಚರಣೆಗಳಿಗಿಂತ ಅಂತರಂಗದ ಸತ್ಯವನ್ನು ಮೌಲ್ಯಗೊಳಿಸುವ ಜೀವನದರ್ಶನವಾಗಿ ರೂಪುಗೊಂಡಿದೆ, ಇದು ಭಿನ್ನತೆಯ ನಡುವೆ ಹೊಂದಾಣಿಕೆಯನ್ನು ಬೆಳೆಸಿ ಸಮಾಜದಲ್ಲಿ ಪರಸ್ಪರ ಗೌರವ ಮತ್ತು ಸಹಜೀವನದ ಭಾವನೆಯನ್ನು ಬಲಪಡಿಸುತ್ತದೆ. ಅದರ ಜೊತೆಗೆ, ಇಂತಹ ಸಂಸ್ಕೃತಿಯ ಬೆಳಕು ಯುವಜನತೆಯ ಹೃದಯ ಮತ್ತು ನಡತೆಯನ್ನು ಸ್ಪರ್ಶಿಸಿ, ಅವರನ್ನು ಕೇವಲ ಇಂದಿನ ಸಮಾಜದವರೆಗೂ ಸೀಮಿತಗೊಳಿಸದೆ ಭವಿಷ್ಯದ ಪೀಳಿಗೆಗಳ ಮೇಲೂ ಜವಾಬ್ದಾರಿಯುತ ವ್ಯಕ್ತಿಗಳಾಗಿ ರೂಪಿಸಲಿ; ಏಕೆಂದರೆ ಈ ಜ್ಞಾನ ಮತ್ತು ತತ್ವಗಳು ಭಾರತಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೆ ದಾರಿ ತೋರಿಸುವ ಶಕ್ತಿಯುಳ್ಳ ಮೌಲ್ಯಗಳೆಂಬ ನಂಬಿಕೆಯನ್ನು ನಾವು ಹೊಂದಿರಬೇಕು.

References


1. Bansal, S. (2018). Ethics of Hinduism: An Indian concept. *International Journal of Research and Analytical Reviews*, 5(3).
2. Biradar, S. (2015). A study of Hindu-Muslim synthesis centers in Kalaburagi. *Indian Streams Research Journal*, 5(7).
3. Biradar, S., & Asha, C. (2019). *ಎರಡನೇ ಇಬ್ರಾಹಿಂ ಆದಿಲ್ ಶಾಹಿಯ ಹಿಂದೂ ಧರ್ಮ ಸಹಿಷ್ಣುತೆ*. In *Indian Cultural Transitions (Since 12th Century)* (Research Articles Edition). ISBN: 978-81-940165-0-2.
4. Engineer, A. A. (Ed.). *Sufism and inter-religious understanding*.
5. Gupta, S. (2018). Sufism in medieval India. *International Journal of Research and Analytical Reviews*, 5(3).
6. Ilahiyah, I., & Suharyat, Y. The role of Sufism in moral development of students.
7. Kamble, M. (2011). Sufi saints in Karnataka. *International Journal of Social Sciences and Humanity Studies*, 3(1), 237–246.
8. Mona, D. (2023). Cultural ethics in ancient India. *International Journal of Global Sustainable Research*, 1(3), 463–470. https://doi.org/10.59890/ijgsr.v1i3.846
9. Reddy, P. S. (2014). A critical analysis of *The Hindu view of life* by Sarvepalli Radhakrishnan. *Online International Interdisciplinary Research Journal*, 4(2), 337.

10. Sarkar, B., & Nasaru, W. (2019). Sufism and its influence in Indian subcontinent. *International Journal of Research in Social Sciences*, 9(3).

11. Tarikere, R. (1998). *Karnatakada sufigalu*.

12. Thapar, S. (2015). Indian Hinduism: A study on its philosophy and perspective of other religions. *Indian Streams Research Journal*, 5(7).